# MANGALORE MARKET REPORTS

MMR MEDIA Since 1975



REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244



Vol.48 ENGLISH DAILY Subscription Yearly - Rs. - MONDAY 27-2-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ದೇಶೀ ಕಾಳುಮೆಣಸು ಉತ್ಪಾದನೆ ಗಣನೀಯ ಇಳಿಕೆ

ಭಾರತದ ಈ ವರ್ಷದ ಕಾಳುಮೆಣಸು ಕಟಾವು ಅಂತ್ಯವಾಗುತ್ತಿದ್ದು ಉತ್ಪಾದನೆ ಗಣನೀಯ ಇಳಿಕೆಯಾಗುತ್ತಿದೆಯೆನ್ನಲಾಗಿದೆ. ಇಳುವರಿ ಆರ್ಥಿಕ ಇಳಿಕೆಯಾಗಿದ್ದು ಒಟ್ಟು ಉತ್ಪಾದನೆ ತೀವ್ರ ಕುಸಿತವಾಗುವ ಸಾಧ್ಯತೆಯಿದೆ. ಜಾಗತಿಕವಾಗಿಯೂ ಉತ್ಪಾದನೆ ಇಳಿಕೆಯಾಗಿರುವುದರಿಂದ ಮುಂದಿನ ತಿಂಗಳುಗಳಲ್ಲಿ ಬೇಡಿಕೆ ಹೆಚ್ಚಳವಾದರೆ ದರ ಹೆಚ್ಚಳವಾಗುವ ಸಾಧ್ಯತೆ ಉಜ್ವಲವಾಗಿದೆ.

## ಮಲೇಶಿಯನ್ ಪಾಮೆಣ್ಣೆ ದರ ಅಲ್ಪ ಮಟ್ಟದ ಇಳಿಕೆ

ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಸತತ 2ನೇ ಅವಧಿಗೆ ಅಲ್ಪ ಮಟ್ಟದ ಇಳಿಕೆಯಾಗಿದೆ. 1–25 ಫೆಬ್ರವರಿ ಅವಧಿಗೆ ರಫ್ತು ಹೆಚ್ಚಳ ಹಾಗೂ ಉತ್ಪಾದನೆ ಇಳಿಕೆಯ ಸಾಧ್ಯತೆಯಿಂದ ದರ ಹೆಚ್ಚಿನ ಇಳಿಕೆಯಾಗಿಲ್ಲವೆನ್ನಲಾಗಿದೆ.

## ಜೀರಿಗೆ ದರ ಇಳಿಕೆ

ತೀವ್ರ ಹೆಚ್ಚಳವಾಗಿದ್ದ ಜೀರಿಗೆ ದರ ಗುಜರಾತ್‌ನಲ್ಲಿ ಹೊಸ ಬೆಳೆಯ ಆವಕ ವೇಗ ಗಳಿಸಿದ್ದರಿಂದ ಈಗ ಇಳಿಕೆಯಾಗುತ್ತಿದೆಯೆನ್ನಲಾಗಿದೆ. ಈ ಮೊದಲಿನ ಅಂದಾಜಿಗಿಂತ ಉತ್ಪಾದನೆ ಹೆಚ್ಚಳವಾಗಬಹುದೆನ್ನಲಾಗಿದ್ದರೂ ಉತ್ಪಾದನೆ ಹಿಂದಿನ ವರ್ಷಕ್ಕಿಂತ ಕಡಿಮೆಯಾಗಬಹುದೆನ್ನಲಾಗಿದೆ.